

ಶಶಾಂಕ್ ಸುಬ್ರಹ್ಮಣ್ಯಮ್

ರತ್ನಮಾಲಾ ಪ್ರಕಾಶ್, ಮ್ಯಾಂಡೊಲಿನ್ ಪ್ರಸಾದ್, ಸುನಿತಾ ಅನಂತಸ್ವಾಮಿ ಮುಂತಾದ ಗಾಯಕ ಗಾಯಕಿಯರು ಆನ್‌ಲೈನ್‌ನಲ್ಲಿ ಸಂಗೀತ ಸುಧೆ ಹರಿಸುತ್ತಿದ್ದಾರೆ. ರೆಡ್ ಎಫ್‌ಎಂ ಹಾಗೂ ಟಿ ಸಿರೀಸ್ ಜಂಟಿಯಾಗಿ 'ಡಿಜಿಟಲ್ ಕಾನ್ಸರ್ಟ್' ಅನ್ನು ಆಯೋಜಿಸಿ ಕೇಳುಗರಿಗೆ ರಸಧಾರೆ ಎರೆಯುತ್ತಿದೆ. ಖ್ಯಾತ ಪಿಟೀಲು ವಾದಕಿ ಕಲಾ ರಾಮನಾಥ್, ಚೆನ್ನೈಯಿಂದಲೇ ದೇಶಾದ್ಯಂತ ಇರುವ ಶಿಷ್ಯರಿಗೆ ಪಿಟೀಲು ಕ್ಲಾಸ್ ಮಾಡುತ್ತಿದ್ದಾರೆ. ಹೀಗೆ ಹೊಸ ವೇದಿಕೆ ಸೃಷ್ಟಿಸಿಕೊಂಡು, ಸಾಮಾಜಿಕ ಅಂತರ ಕಾಯ್ದುಯಕೊಂಡೇ ಕಲಾಬಾಂಧವ್ಯವನ್ನೂ ಮೆರೆಯುತ್ತಿರುವುದು ಹೊಸ ಬೆಳವಣಿಗೆ.

ಖ್ಯಾತ ಕಲಾವಿದೆ ದುರ್ಗಾ ಜಸ್‌ರಾಜ್ ತಂಡ 'ಆರ್ಟ್ ಆಂಡ್ ಆರ್ಟಿಸ್ಟ್ ಕ್ಲಬ್' ಆನ್‌ಲೈನ್ ವೇದಿಕೆಯಡಿ ಮುಂಬಯಿಯಲ್ಲೇ ಇದ್ದುಕೊಂಡು ಖ್ಯಾತ ಕಲಾವಿದರಿಂದ ಆನ್‌ಲೈನ್ ಕಛೇರಿ ನಡೆಸಿಕೊಡುತ್ತಿದೆ. ಈ ವೇದಿಕೆಯಲ್ಲಿ ಪಂ. ವಿಶ್ವಮೋಹನ ಭಟ್ ಸೇರಿದಂತೆ ದೇಶದ ದಿಗ್ಗಜ ಸಂಗೀತಗಾರರು ಪಾಲ್ಗೊಂಡು ಕಛೇರಿ ನೀಡುತ್ತಿದ್ದಾರೆ.

'ಪ್ರತಿ ಸಂದರ್ಭವೂ ಜೀವನದಲ್ಲಿ ಅವಕಾಶ ಒದಗಿಸುತ್ತದೆ. ಇದು ದೇಶದ ಜನರ ಪಾಲಿಗೆ ಕ್ಲಿಷ್ಟ ಕಾಲಘಟ್ಟ. ಮನೆಗಳಲ್ಲಿ ಬಂಧಿಯಾಗಿರುವ ಜನರಲ್ಲಿ ಆವರಿಸಿರುವ ಆತಂಕ ಕಡಿಮೆ ಮಾಡಿ, ಮನಕ್ಕೆ ಮುದ ನೀಡುವ ಸಂಗೀತ ಈಹೊತ್ತಿನ ಅಗತ್ಯ. ಸಂಗೀತಕ್ಕೆ ಅಗಾಧ ಶಕ್ತಿಯಿದೆ. ಪಂಡಿತ್ ಜಸ್‌ರಾಜ್ ಅವರ ಪುತ್ರಿಯಾಗಿ ನಾನು ಆ ನಂಬಿಕೆ ಇಟ್ಟುಕೊಂಡು ಅಳಿಲು ಸೇವೆ ಸಲ್ಲಿಸುತ್ತಿದ್ದೇನೆ' ಎಂದು ದುರ್ಗಾ ಜಸ್‌ರಾಜ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಅವರ ನೇತೃತ್ವದ ಕಛೇರಿಗಳನ್ನು **twitter.com/durgajasraj** ಕೊಂಡಿ ಬಳಸಲಿ ಆಲಿಸಬಹುದು.

ಕ್ಯಾಲಿಫೋರ್ನಿಯಾದ ಹಂಸಧ್ವನಿ ಕರ್ನಾಟಕ ಸಂಗೀತ ಅಕಾಡೆಮಿ, 'ಸಂಜೀವಿನಿ ಸೀರೀಸ್' ಹೆಸರಿನಲ್ಲಿ ನಡೆಸಿದ ಆನ್‌ಲೈನ್ ಲೈವ್ ಕಛೇರಿಯಲ್ಲಿ ಯುವ ಪಿಟೀಲು ಕಲಾವಿದ ಮೈಸೂರು ಸುಮಂತ್ ಅವರು ಈಚೆಗೆ ಮೈಸೂರಿನ ತಮ್ಮ ಮನೆಯಲ್ಲಿ ಕುಳಿತೇ ಪಿಟೀಲು ನುಡಿಸಿದ್ದನ್ನು ವಿಶ್ವದಾದ್ಯಂತ ಸಾವಿರಾರು ಕೇಳುಗರು ವೀಕ್ಷಿಸಿದ್ದರು.

ಇನ್ನು ಸಂಗೀತಪಾಠದ ವಿಷಯಕ್ಕೆ ಬಂದರೆ, ಬೆಂಗಳೂರಿನಲ್ಲಿರುವ ಬಹುತೇಕ ಹಿರಿಯ ಕಲಾವಿದರು ತಮ್ಮ ಶಿಷ್ಯಂದಿರಿಗೆ ಆನ್‌ಲೈನ್ ಪಾಠ ಮಾಡುವ ಮೂಲಕ 'ಗುರು–ಶಿಷ್ಯ' ಸಂಬಂಧಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುತ್ತಿದ್ದಾರೆ.

### ಭಿನ್ನ ರೀತಿಯ ಸ್ಪಂದನ

ವಿಶ್ವದಾದ್ಯಂತ ಸಾವಿರಾರು ಪಿಟೀಲು ಕಛೇರಿಗಳನ್ನು ನೀಡುತ್ತಾ ಸದಾ ಬ್ಯುಸಿಯಾಗಿರುವ ಮೈಸೂರು ಮಂಜುನಾಥ್, ಈ ಸಲ ಅನಿವಾರ್ಯವಾಗಿ ಆನ್‌ಲೈನ್ ಸಂಗೀತ ಕಛೇರಿ ನಡೆಸಿಕೊಡುತ್ತಿದ್ದಾರೆ.

'ಈಗ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿರುವ ಬಹಳಷ್ಟು ಸಂಸ್ಥೆಗಳು ಆನ್‌ಲೈನ್ ಕಛೇರಿಗಳಿಗೆ ಒತ್ತು ಕೊಡುತ್ತಿವೆ. ಟಾಪ್ ಲೆವಲ್ ಕಲಾವಿದರಿಗೆ ಮಾಮೂಲಾಗಿ ಟೈಂ ಇರೋದಿಲ್ಲ. ಹಾಗಾಗಿ ಆನ್‌ಲೈನ್ ಕಛೇರಿಗಳಿಗೆ ಪ್ರಾಮುಖ್ಯತೆ ಕೊಡಲ್ಲ. ಆದರೆ ಬೆಂಗಳೂರಿನ ಕೋಟೆ ರಾಮನವಮಿ ಸಂಗೀತೋತ್ಸವದ ಸಂಘಟಕರು ಮನವಿ ಮಾಡಿದ ಕಾರಣ ಒಪ್ಪಿಕೊಂಡು ಸುಮಂತ್ ಜೊತೆಗೂಡಿ ಪಿಟೀಲು ಕಛೇರಿ ನಡೆಸಿಕೊಟ್ಟೆ. ಇದನ್ನು ಸುಮಾರು ಮೂವತ್ತು ಸಾವಿರ ಮಂದಿ ಆಸ್ವಾದಿಸಿದ್ದಾರೆ' ಎನ್ನುತ್ತಾರೆ ಮೈಸೂರು ಮಂಜುನಾಥ್.

'ಕೇಳುಗರು ದೂರದಲ್ಲಿ ಕುಳಿತು ಕೇಳ್ತಿರ್ತಾರೆ ಅನ್ನೋದು ಗೊತ್ತಿದ್ದರೂ, ಕ್ಯಾಮೆರಾ ಮುಂದೆ ಕುಳಿತು ನುಡಿಸುವುದರಿಂದ ನಮಗೆ ಅಷ್ಟೊಂದು ಸಂತೋಷ ಸಿಗಲ್ಲ. ಏಕೆಂದರೆ ಇಲ್ಲಿ ಪ್ರೇಕ್ಷಕ–ಕಲಾವಿದರ ನಡುವಿನ ಸಂವಹನ, ಸಂವಾದದ ಚಾರ್ಮ್ ಮಿಸ್ ಆಗುತ್ತೆ. ಸಾವಿರಾರು ಕೇಳುಗರು ಎದುರುಗಡೆ ತನ್ಮಯರಾಗಿ ಕುಳಿತು ತಾಳ ಹಾಕೊಂಡು 'ಆಹಾ, ವಾವ್...' ಎಂದು ಖುಷಿಯಿಂದ ಉದ್ಗರಿಸುವಾಗ ಆಗುವ ಸಂತೋಷ ಇಲ್ಲಿ ಗೌಣ' ಎಂದೂ ಹೇಳುತ್ತಾರೆ ಅವರು.

'ಸ್ಪಂದನದ ರೀತಿ ಭಿನ್ನವೆಂದ ಮಾತ್ರಕ್ಕೆ ಲೈವ್ ಕಛೇರಿಗಳನ್ನು ಕೇಳುಗರು ಆಸ್ವಾದಿಸೋದಿಲ್ಲ ಎಂದಲ್ಲ. ಮೊನ್ನೆ ಮೊನ್ನೆ ಜರ್ಮನಿಯ ಎನ್‌ಡಿಆರ್ ಟೀವಿ ನಡೆಸಿದ ನನ್ನ ಪಿಟೀಲು ಲೈವ್ ಕಛೇರಿಯನ್ನು ಸಾವಿರಾರು ಜನ ನೋಡಿದ್ದರು. ಇಂಗ್ಲೆಂಡ್‌ನ ಸೇಂಟ್ ಬೀಸಾ ನಗರದಲ್ಲಿರುವ 'ಸೇಂಟ್ ಬೀಸ್ ಕಮ್ಯುನಿಟಿ ರೇಡಿಯೊ', ಕೊರೊನಾ ಸಮಯದಲ್ಲಿ

## ಕೊರೊನಾ ಕಡಿವಾಣ

ಸಂಗೀತ ಕಛೇರಿ, ಕ್ಲಾಸ್‌ಗಳಿಗೆ ಕೊರೊನಾ ಕಡಿವಾಣ ಹಾಕಿದೆ. ಆದರೂ ಬೆಂಗಳೂರಿನ ಹಲವಾರು ಕಲಾವಿದರು ಮನೆಯಿಂದಲೇ ಆನ್‌ಲೈನ್ ಪಾಠ ಮಾಡುತ್ತಿದ್ದಾರೆ. ಬೆಂಗಳೂರಿನ ಶ್ರೀರಾಜರಾಜೇಶ್ವರಿ ಕಲಾನಿಕೇತನದ ನೃತ್ಯಗುರು ವೀಣಾಮೂರ್ತಿ, ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿ, ಲಿಂಕ್‌ಗಳನ್ನು ಕಳಿಸುವ ಮೂಲಕ ಆನ್‌ಲೈನ್‌ನಲ್ಲೂ ಕಲಿಸುತ್ತಿದ್ದಾರೆ.

ಸಂಜಯನಗರದ ಅಮೃತಾ ಸಂಗೀತ ಅಕಾಡೆಮಿಯಲ್ಲಿ ಸಂಗೀತ ಗುರು ಸವಿತಾ ರವಿ ಮೊದಲ ಬಾರಿ ಆನ್‌ಲೈನ್ ಸಂಗೀತ ಪ್ರಯೋಗಕ್ಕೆ ಮುಂದಾಗಿದ್ದಾರೆ. ವಸಂತನಗರದಲ್ಲಿರುವ ವಸಂತ ಡಾನ್ಸ್ ಸ್ಟುಡಿಯೊದಲ್ಲಿ ಸಾಲ್ಸಾ, ಕಂಟೆಂಪರರಿ, ಬಾಡಿ ಮೂವ್‌ಮೆಂಟ್, ಫಿಲ್ಮಿ ನೃತ್ಯಗಳನ್ನು ಆನ್‌ಲೈನ್ ಮೂಲಕವೇ ಕಲಿಸುತ್ತಿದೆ. ಇದರ ಮುಖ್ಯಸ್ಥ ಲೂರ್ಡ್ ವಿಜಯ್ ದಿನಕ್ಕೆ ಆರು ಗಂಟೆಗಳ ಕಾಲ ಆನ್‌ಲೈನ್ ಮೂಲಕ ಡಾನ್ಸ್ ಕಲಿಸುತ್ತಿದ್ದಾರೆ.